ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/267/ಅರೆಕಾಲಿಕ ಉ.ಸೇ.ಸ.ಯುಜಿಸಿ ವೇವಿ/2016-17/ಸೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು. ದಿನಾಂಕ: 06.02.2017

# ಸುತ್ತೋಲೆ

**ವಿಷಯ:** ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಕ್ರಮಗೊಂಡ ಅರೆಕಾಲಿಕ ಉಪನ್ಯಾಸಕರಿಗೆ ಯುಜಿಸಿ ವೇತನ ವಿಸ್ತರಿಸುವ ಬಗ್ಗೆ

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ:ಇಡಿ/378/ಯುಎನ್ಇ/2014.ದಿ:17.10.2016

********

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಆದೇಶದಲ್ಲಿ ದಿನಾಂಕ:11.07.2009ರ ಪೂರ್ವದಲ್ಲಿ ಎಂ.ಫಿಲ್ ಪದವಿಗೆ ನೋಂದಣಿ ಮಾಡಿ ನಂತರ ಪದವಿ ಪಡೆದ ಸಕ್ರಮಾತಿಗೊಂಡ ಅರೆಕಾಲಿಕ ಉಪನ್ಯಾಸಕರುಗಳಿಗೆ ಮಾತ್ರ ಎಂ.ಫಿಲ್ ಪದವಿ ಪಡೆದ ದಿನಾಂಕದಿಂದ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸಲು ಆದೇಶಿಸಿದ್ದು, ಸದರಿ ಆದೇಶದಲ್ಲಿ ಎಂ.ಫಿಲ್ ಪದವಿಯ ನೈಜತೆಯ ಬಗ್ಗೆ ಕಾಲೇಜು ಶಿಕ್ಷಣ ಆಯುಕ್ತರು ಪರಿಶೀಲಿಸತಕ್ಕದ್ದು ಎಂಬ ಷರತ್ತನ್ನು ವಿಧಿಸಿರುವ ಹಿನ್ನಲೆಯಲ್ಲಿ ಸದರಿ ಆದೇಶದಂತೆ ಸಕ್ರಮಾತಿಗೊಂಡ ಅರೆಕಾಲಿಕ ಉಪನ್ಯಾಸಕರುಗಳಿಗೆ ಯುಜಿಸಿ ವೇತನ ಶ್ರೇಣಿ ವಿಸ್ತರಿಸುವ ಸಂಬಂಧ ಪ್ರಸ್ತಾವನೆಗಳನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸುತ್ತಾ, ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಈ ಕೆಳಕಂಡ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಮಾತ್ರ ಸಲ್ಲಿಸುವಂತೆ ಸಹ ಸೂಚಿಸಲಾಗಿದೆ:

01. ಅರೆಕಾಲಿಕ ಉಪನ್ಯಾಸಕರ ಸೇವಾ ಸಕ್ರಮಾತಿ ಆದೇಶದ ದೃಢೀಕೃತ ಪ್ರತಿ
02. ಎಂ.ಫಿಲ್ ಪದವಿಗೆ ನೋಂದಣಿಯಾದ ದಿನಾಂಕ ಕುರಿತು ವಿಶ್ವವಿದ್ಯಾಲಯದ ದಾಖಲಾತಿಯ ದೃಢೀಕೃತ ಪ್ರತಿ
03. ಎಂ.ಫಿಲ್ ಪದವಿಯ ಅಂಕಪಟ್ಟಿಯ ದೃಢೀಕೃತ ಪ್ರತಿಗಳು
04. ಎಂ.ಫಿಲ್ ಪದವಿ ಸಂಬಂಧ ಡೆಸರ್‌ಟೇಶನ್ (Disseration) ಸಲ್ಲಿಸಿರುವ ಕುರಿತು ದಾಖಲಾತಿಯ ದೃಢೀಕೃತ ಪ್ರತಿ
05. ಡೆಸರ್‌ಟೇಶನ್ (Disseration)ಅನ್ನು ಮೌಲ್ಯಮಾಪಕರು ಮೌಲ್ಯಮಾಪನ ಮಾಡಿರುವ ದಾಖಲೆಗಳ ದೃಢೀಕೃತ ಪ್ರತಿ
06. ಎಂ.ಫಿಲ್ ಪದವಿ ಸಂಬಂಧ ಡೆಸರ್‌ಟೇಶನ್ (Disseration) ಕುರಿತಂತೆ Viva-Voce ನಡೆದಿರುವ ಬಗ್ಗೆ ದಾಖಲೆಗಳ ದೃಢೀಕೃತ ಪ್ರತಿ
07. ಎಂ.ಫಿಲ್ ಪದವಿ ಪ್ರಧಾನ ಮಾಡುವ ಸಂಬಂಧ ವಿಶ್ವವಿದ್ಯಾಲಯವು ಹೊರಡಿಸಿರುವ ಅಧಿಸೂಚನೆಯ ದೃಢೀಕೃತ ಪ್ರತಿ

ಮೇಲಿನ ದಾಖಲಾತಿಗಳ ದೃಢೀಕೃತ ಪ್ರತಿಗಳು ಮಾತ್ರ ಈ ಕಛೇರಿಗೆ ಸಲ್ಲಿಸತಕ್ಕದ್ದು. ಯಾವುದೇ ಕಾರಣಕ್ಕೂ ಸದರಿ ದಾಖಲಾತಿಗಳ ಮೂಲ ಪ್ರತಿಗಳನ್ನು ಸಲ್ಲಿಸದಿರಲು ಸೂಚಿಸಿದೆ. ಮುಂದುವರೆದು.

ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ತಿಳಿಸಿರುವಂತೆ ಈ ಕಛೇರಿಯ ಅನುಮತಿ ಇಲ್ಲದೇ ಯುಜಿಸಿ ವೇತನ ಶ್ರೇಣಿಯನ್ನು ಸಕ್ರಮಾತಿಗೊಂಡ ಅರೆಕಾಲಿಕ ಉಪನ್ಯಾಸಕರುಗಳಿಗೆ ವಿಸ್ತರಿಸಿರುವುದು ಕಂಡು ಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

ಇವರಿಗೆ.

1. ಪ್ರಾದೇಶಿಕ ಜಂಟಿ ನಿರ್ದೇಶಕರು. ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು ಧಾರವಾಡ ಹಾಗೂ ಕಲಬುರಗಿ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
2. ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಡುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಹಾಗೂ ಕಾನೂನು ಕಾಲೇಜುಗಳ ಪ್ರಾಂಶುಪಾಲರ ಅಗತ್ಯ ಕ್ರಮಕ್ಕಾಗಿ.

ಪ್ರತಿಗಳು:

01. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
02. ಮ್ಯಾನೇಜರ್/ಅಧೀಕ್ಷಕರು. ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ ಅಗತ್ಯ ಕ್ರಮಕ್ಕಾಗಿ.
03. ಕಛೇರಿ ಪ್ರತಿ.